ಕರಾಮುವಿ ಸುದ್ದಿ ಪತ್ರಿಕೆ

KSOU NewsLetter

Volume: 4 Issue: 6 NOVEMBER-DECEMBER 2025

ಆಂತರಿಕ ಪ್ರಸಾರಕ್ಕೆ ಮಾತ್ರ

ಸಂಪುಟ: 4 | ಸಂಚಿಕೆ: 6 | ನವೆಂಬರ್-ಡಿಸೆಂಬರ್ 2025

# ಕ.ರಾ.ಮು.ವಿಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ





ದಿನಾಂಕ:05.11.2025ರಂದು ಬೆಳಗ್ಗೆ 9.45 ಗಂಟೆಗೆ ಘಟಿಕೋತ್ಸವ ಭವನದಲ್ಲಿ ಕನ್ನಡ ರಾಜ್ಯೋತ್ಸವವನ್ನು ಮತ್ತು ನಾಡಗೀತೆ ಶತಮಾನ ಸಂಭ್ರಮ 2025ರ ಕಾರ್ಯಕ್ರಮವನ್ನು ಆಚರಿಸಲಾಯಿತು.

ಕರಾಮುವಿ ಆವರಣದಲ್ಲಿ ಬೆಳ್ಳಿ ರಥದಲ್ಲಿ ಭುವನೇಶ್ವರಿ ತಾಯಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ರಥಕ್ಕೆ ಚಾಲನೆ ನೀಡಿದರು. ಬೆಳ್ಳಿ ರಥದಲ್ಲಿ ಭುವನೇಶ್ವರಿ ತಾಯಿಯ ಮೆರವಣಿಗೆ ಮತ್ತು ಜಾನಪದ ಕಲಾ ತಂಡಗಳಿಂದ ನಾದಸ್ವರ, ಸಾಂಸ್ಕೃತಿಕ ಕಾರ್ಯಕ್ರಮ, ಪೂಜಾ ಕುಣಿತ, ಡೊಳ್ಳು ಕುಣಿತ, ತಮಟೆ, ಗಾರುಡಿ ಗೊಂಬೆ, ಬೀಸು ಕಂಸಾಳೆ ನೃತ್ಯ ಪ್ರದರ್ಶನದೊಂದಿಗೆ ವಿಜೃಂಭಣೆಯಿಂದ ಮೆರವಣಿಗೆಯು ವಿಶ್ವವಿದ್ಯಾನಿಲಯದ ಆವರಣವನ್ನು ಒಂದು ಸುತ್ತು ಬಂದು ಕೊನೆಗೆ ಘಟಿಕೋತ್ಸವ ಭವನಕ್ಕೆ ಬಂದು ತಲುಪಿತು. ನಂತರ ಘಟಿಕೋತ್ಸವ ಭವನದಲ್ಲಿ ಮಹಿಷಾಸುರ ಮರ್ದಿನಿ ನೃತ್ಯ ರೂಪಕ ಪ್ರದರ್ಶನವನ್ನು ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಡಗರದಿಂದ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಕರಾಮುವಿ ಕುಲಸಚಿವರಾದ ಪ್ರೊ.ಎಸ್.ಕೆ. ನವೀನ್ ಕುಮಾರ್, ಡೀನ್ ಶೈಕ್ಷಣಿಕರಾದ ಪ್ರೊ. ಎಂ. ರಾಮನಾಥಂ ನಾಯುಡು, ಪರೀಕ್ಷಾಂಗ ಕುಲಸಚಿವರಾದ ಡಾ. ಸಿ.ಎಸ್ ಆನಂದ ಕುಮಾರ್. ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್. ಚಂದ್ರೇಗೌಡ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಜರಾಗಿದ್ದರು.

ಕಾರ್ಯಕ್ರಮವು ಶ್ರೀ ರಾಮಚಂದ್ರ ಜಿ. ಮತ್ತು ತಂಡದವರು ವಿಶ್ವಮಾನವ ಗೀತೆ ಮತ್ತು ನಾಡಗೀತೆ ಆರಂಭಿಸಿದ ಕೂಡಲೇ ಸಭಿಕರೆಲ್ಲ ಧ್ವನಿಗೂಡಿಸಿದರು. ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಡಾ.ಎನ್.ಆರ್. ಚಂದ್ರೇಗೌಡ, ಡೀನ್ (ಅಧ್ಯಯನ ಕೇಂದ್ರ) ರವರು ನೆರವೇರಿಸಿದರು.

ಪ್ರೊ. ಎಂ. ರಾಮನಾಥಂ ನಾಯುಡು ಡೀನ್ (ಶೈಕ್ಷಣಿಕ) ರವರು ಕನ್ನಡ ಭಾಷೆಗೆ ಸಾವಿರಾರು ವರ್ಷ ಇತಿಹಾಸವಿದೆ. ಕನ್ನಡ ಕಸ್ತೂರಿಯ ಪರಿಮಳದಿಂದ ರಾಷ್ಟ್ರಕವಿ ಕುವೆಂಪು ಅವರಿಂದ ಚಂದ್ರಶೇಖರ ಕಂಬಾರರವರೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಕನ್ನಡಕ್ಕೆ ಸಂದಿವೆ. ಸಕ್ಕರೆನಾಡು, ರೇಷ್ಮೆನಾಡು, ಬಯಲು ನಾಡು, ಕದಂಬರ ನಾಡು, ಗಂಗರ ನಾಡು, ಹೊಯ್ಸಳ ನಾಡು ಮುಂತಾದವುಗಳೆಲ್ಲ ಸೇರಿ ಕನ್ನಡನಾಡಾಗಿದೆ ಎಂದು ತಮ್ಮ ಪ್ರಾಸ್ತಾವಿಕ ನುಡಿಯೊಂದಿಗೆ ತಿಳಿಸಿದರು.

ಬಣ್ಣದಲ್ಲಿ ಕುವೆಂಪು ಭಾವಚಿತ್ರ ಮೂಡಿಸುವ ಮತ್ತು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಬಣ್ಣದಲ್ಲಿ ಕುವೆಂಪು ಭಾವಚಿತ್ರ ಮೂಡಿಸುವ ಮೂಲಕ ವೇದಿಕೆಯಲ್ಲಿನ ಗಣ್ಯರಾದ ಶ್ರೀಮತಿ ಉಮಾಶ್ರೀ, ಖ್ಯಾತ ಚಲನಚಿತ್ರ ನಟಿ ಮತ್ತು ಪ್ರೊ. ಪಿ. ಕೆ. ರಾಜಶೇಖರ, ಜಾನಪದ ವಿದ್ವಾಂಸರು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ ಖ್ಯಾತ ಕನ್ನಡ ಚಲನಚಿತ್ರ ನಟಿ, ವಿಧಾನಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀಮತಿ ಉಮಾಶ್ರೀರವರನ್ನು ಸಭಿಕರಿಗೆ ಪರಿಚಯಿಸುವ ಮಹತ್ವದ ಜವಾಬ್ದಾರಿಯನ್ನು ಶ್ರೀ ಜಿ.ಎಸ್. ಮಂಜುನಾಥ್, ಆಡಿಯೋ ವಿಭಾಗ, ಕರಾಮುವಿ, ಮೈಸೂರು ಅವರು ವಹಿಸಿಕೊಂಡು ಅತಿಥಿಗಳ ಶೈಕ್ಷಣಿಕ ಹಿನ್ನೆಲೆ, ಸಾಧನೆಗಳು ಹಾಗೂ ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಮೂಲಕ ಅವರ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದರು. ಇದರಿಂದ ಕಾರ್ಯಕ್ರಮದ ಗೌರವ ಮತ್ತು ಅರ್ಥಪೂರ್ಣತೆ ಇನ್ನಷ್ಟು ಹೆಚ್ಚಾಯಿತು..

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಉಮಾಶ್ರೀಯವರು ಇತ್ತೀಚಿನ ವರ್ಷಗಳಲ್ಲಿ ಕಂಪ್ಯೂಟರ್ ಮತ್ತು ಮೊಬೈಲ್ ಅತಿಯಾದ ಅವಲಂಬನೆಯಿಂದಾಗಿ ಓದುವ ಹವ್ಯಾಸ ಮತ್ತು ಮೆದುಳಿನ ಬಳಕೆ ಕಡಿಮೆಯಾಗಿದೆ. ಆದ್ದರಿಂದ ಓದುವವರೇ ಹೆಚ್ಚಿದ್ದಂತಹ ಹಳೆ ಬೇರು ಹೊಸ ಚಿಗುರಿನಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯದ ನಾಡು-ನುಡಿಗೆ ಸಂಬಂಧ ಪಟ್ಟಂತೆ ಸಾಕಷ್ಟು ಹೋರಾಟಗಳು ನಡೆದಿವೆ. ಅದರಲ್ಲೂ ಮೈಸೂರು ಎಂದರೆ ರಾಜವಂಶಸ್ಥರು ಶಿಕ್ಷಣ ಮತ್ತು ಸಂಗೀತಕ್ಕೆ ನೀಡಿದ ಕೊಡುಗೆ ನೆನಪಾಗುತ್ತದೆ. ಮೈಸೂರು ಒಡೆಯರು ನೀಡಿದ ಪ್ರೋತ್ಸಹದೊಂದಿಗೆ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯವು 1916ರಿಂದಲೂ ಮಹತ್ವದ ಕೊಡುಗೆ ನೀಡುತ್ತಾ ಬಂದಿದೆ. ಅದೇ ರೀತಿಯಲ್ಲಿ ಉನ್ನತ ವಿದ್ಯಾಭ್ಯಾಸ ಎಲ್ಲರಿಗೂ ಸಿಗಬೇಕು ಎಂಬ ಉದ್ದೇಶದೊಂದಿಗೆ ಕರ್ನಾಟಕ ರಾಜ್ಯ ಮುಕ್ತ ವಿವಿಯೂ ಕಾರ್ಯನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

**3ನೇ ಪುಟಕ್ಕೆ**

# A Two-Day International Conference on "The Confluence of Cinema, Literature & Culture" 03rd & 04th November 2025.

The Department of Studies and Research in English, Karnataka State Open University, Mukthagangothri, Mysuru, successfully organized **a Two-Day International Conference on "The Confluence of Cinema, Literature and Culture" on 03 and 04 November 2025.** The conference aimed to examine how cinema and literature, though distinct artistic forms, intersect and interact to reflect culture, society, and the shared human experience.

The conference brought together eminent scholars, filmmakers, academicians, researchers, and students from across the globe. Over two intellectually engaging days, participants reflected on how literature and cinema illuminate human emotions, cultural identities, social realities, and ideological concerns.

**Day 1 – Inaugural Session (03 November 2025)**

The inaugural session began with the **Welcome Address by Dr. S. Srikanth, Chairman, Department of Studies and Research** in English and the Organizing Secretary of the Conference, who outlined the theme and significance of the conference.

**The Inaugural Address** was delivered by **Professor Senesh Dissanaike Bandara, Chairman, State Cinema Board of Arts Council, Ministry of Cultural Affairs, Sri Lanka**. He spoke on the reciprocal relationship between literature and cinema, highlighting four major aspects: the influence of literature on cinema, the influence of cinema on literature, culture as a connecting bridge between the two, and the continuous process of adaptation and reinterpretation that sustains both art forms. His address emphasized that cinema and literature are dynamic cultural practices that evolve together across nations and histories.

**The Guest of Honour, Padmashree Dr. Chandrashekhar Kambara, eminent Kannada poet, playwright, and Jnanapeetha Awardee**, delivered a profound address focusing on the aesthetic and philosophical relationship between literature and performing arts. He elaborated on how literary imagination finds new life through cinema and theatre, transforming written narratives into powerful visual experiences. Dr. Kambara emphasized that cinema, when rooted in literary sensibility, preserves cultural memory, folk traditions, and regional ethos. He highlighted how adaptations should retain the emotional depth, ethical concerns, and aesthetic integrity of literature, while creatively responding to contemporary audiences. His speech inspired scholars to view cinema not merely as entertainment, but as a serious cultural and artistic expression.

**The Keynote Address** was delivered by **Professor Nikhila S, Department of Film Studies, English and Foreign Languages University, Hyderabad.** She examined the evolving relationship between literature and cinema, stressing that cinematic adaptations are creative recontextualizations rather than inferior reproductions. Drawing on M. K. Raghavendra's Beyond Bollywood, she discussed the role of language, culture, and politics in shaping Indian national cinemas and highlighted the importance of cine-politics in understanding adaptations.

The session was presided over by **Professor Naveen Kumar S. K,**



**Registrar, Karnataka State Open University, Mysuru**, who **delivered the Presidential Remarks**. He spoke on the close interconnection between cinema, literature, and culture, and appreciated the department for organizing an international academic platform that promoted interdisciplinary research. He encouraged students and researchers to actively engage in such scholarly forums to enhance academic excellence and cultural understanding.

**Plenary Sessions**

**Day 1 – Plenary Session-I (03 November 2025)**

Plenary Session I featured **Professor N. Manu Chakravarthy, renowned scholar and author**, who spoke on **"The Multiple Traditions of Cinema: Encounters with Experience, Knowledge and Politics."** He discussed various global cinematic traditions, including Soviet, Hungarian, and Japanese cinema, and illustrated how filmmakers like Kurosawa and Tarkovsky engage with mythology, history, ideology, and politics. The session was chaired by Professor Vijay Seshadri, Senior Professor, University of Mysore, Mandya.

Plenary Session II was delivered by Professor Srinivas S. V., School of Liberal Studies, Azim Premji University, Bengaluru, on "The Digital Turn: The Decline of Viewership and Readership." He examined how digital media has reshaped cultural consumption and audience engagement. The session was chaired by Dr. G. B. Shailesh Raj Urs, Associate Professor and Chairman, Department of Journalism and Mass Communication, KSOU.

**Day 2 – Plenary Session-II (04 November 2025)**

**Plenary Session-III** was delivered by **Professor P. Thirumal, Department of Communication, Central University of Hyderabad**, on **"Emotions in Cinema and Literature."** He explored how cinema and literature evoke empathy, represent social realities, and articulate multilayered human emotions, with particular reference to modernity, caste, and regional cinema. The session was chaired by Professor Dattatreya, Kuvempu University, Shivamogga.


**Plenary Session-IV** featured **Professor Meena T. Pillai, Senior Professor and Director, Centre for Cultural Studies, University of Kerala**, who spoke on **"Gender, Labour and Myth Making: New Affective Economies in Cinema and Literature."** Referring to the HEMA Committee Report, she critically examined gender inequality, patriarchy, and exploitative labour practices in the film industry. The session was chaired by Professor C. E. Sujatha, University of Mysore, Hassan.

**Technical Sessions**

The conference included **10–12 parallel technical sessions**, comprising approximately **100 offline paper presentations and 56 online presentations**. The papers covered diverse interdisciplinary themes related to cinema, literature, culture, gender, politics, digital media, and aesthetics. Each session was chaired by senior academicians who provided constructive feedback and facilitated meaningful academic discussions.

**Day 2 – Valedictory Session:**

**The Valedictory Session** was conducted on **04th of November 2025** and began with a Welcome Address by Dr. Madhura A. S., Assistant Professor, Department of Studies and Research in English, KSOU, Mysuru.



**The Valedictory Address** was delivered by **Professor Nandini Sahu, Hon'ble Vice-Chancellor, Hindi University, West Bengal.** In her insightful speech, she emphasized the transformative power of interdisciplinary research and highlighted the importance of dialogue between literature, cinema, and culture in shaping socially responsible and inclusive narratives. She encouraged young researchers to pursue innovative and socially relevant research that transcends disciplinary boundaries.

**The Special Invitee**, **Sri Sadhu Kokila, Chairman, Karnataka Film Academy, Government of Karnataka**, addressed the gathering by sharing his experiential insights from the film industry. He highlighted the role of cinema as a cultural educator and emphasized the need for meaningful collaboration between academia and the creative industries to nurture social consciousness and emphasised the significant role the cinema could play in materialising it.

The session was **presided** over by **Professor Naveen Kumar S. K, Registrar, KSOU, Mysuru**, who appreciated the organizers, speakers, and participants for making the conference a grand academic success.

The **Vote of Thanks** was proposed by **Dr. Vinutha P. Kunderi, Assistant Professor, Department of Studies and Research in English, KSOU, Mysuru**, who expressed gratitude to all dignitaries, speakers, participants, organizing committee members, and volunteers for their support and contributions.

## ಉರ್ದು ದಿನಾಚರಣೆ

ದಿನಾಂಕ:10.11.2025 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಉರ್ದು ವಿಭಾಗದ ವತಿಯಿಂದ ಉರ್ದು ದಿನಾಚರಣೆಯನ್ನು ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ರವರು ವಹಿಸಿ ಮಾತನಾಡುತ್ತಾ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉರ್ದು ವಿಭಾಗದ ವತಿಯಿಂದ ಉರ್ದು ದಿನಾಚರಣೆಯನ್ನು ಹಮ್ಮಿಕೊಂಡಿರುವುದು ಅತ್ಯಂತ ಸಂತೋಷಕರ ಸಂಗತಿ ಎಂದು ತಿಳಿಸುತ್ತಾ ಪ್ರಸ್ತುತ ನಮ್ಮ ದೇಶದಲ್ಲಿ ಅದರಲ್ಲೂ ಯುವ ಜನತೆಯಲ್ಲಿ ನಾವೆಲ್ಲರೂ ಭಾರತೀಯರು, ಇಲ್ಲಿ ಯಾವುದೇ ಜಾತಿ, ಧರ್ಮ ಲಿಂಗ ಬೇದಬಾವ ಮಾಡಬಾರದು ನಾವೆಲ್ಲರೂ ಒಂದೇ, ಅದು ಮನುಷ್ಯ ಧರ್ಮ ಮಾತ್ರ, ಆದ್ದರಿಂದ ಯುವ ಜನತೆಯಲ್ಲಿ ಭಾವೈಕ್ಯತೆಯ ಭಾವನೆಯನ್ನು ಮೂಡಿಸಬೇಕು. ಇದರಲ್ಲಿ ಹಿರಿಯರ ಹಾಗೂ ಶಿಕ್ಷಕರ ಪಾತ್ರ ಅಮೂಲ್ಯವಾದದ್ದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ವರಿಗೂ ಸ್ವಾಗತ ಕೋರುತ್ತಾ ಪ್ರಾಸ್ತಾವಿಕವಾಗಿ ಮಾತನಾಡಿದ ಡೀನ್(ಶೈಕ್ಷಣಿಕ)ಪ್ರೊ. ಎಂ. ರಾಮನಾಥಂ ನಾಯುಡುರವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉರ್ದು ವಿಭಾಗದಲ್ಲಿ ಶೈಕ್ಷಣಿಕವಾಗಿ ವರ್ಷವಿಡಿ ನಡೆಸಿದಂತಹ ಚಟುವಟಿಕೆಯ ಬಗ್ಗೆ



ಮಾಹಿತಿ ನೀಡಿದರು. ಕುಲಸಚಿವರಾದ ಪ್ರೊ. ನವೀನ್ ಕುಮಾರ್ ಎಸ್. ಕೆ ರವರು ಮಾತನಾಡಿ ಉರ್ದು ದಿನಾಚರಣೆಯ ಪ್ರಯುಕ್ತ ಎಲ್ಲರಿಗೂ ಶುಭಾಶಯವನ್ನು ತಿಳಿಸಿ, ಭಾಷೆಯ ಮಹತ್ವವನ್ನು ತಿಳಿಸಿದರು. ಉರ್ದು ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಈ ಕಾರ್ಯಕ್ರಮದ ಸಂಯೋಜಕರಾದ ಡಾ. ಮೊಹಮ್ಮದ್ ನಸ್ರುಲ್ಲಾ ಖಾನ್ ರವರು ತಮ್ಮ ವಿಭಾಗಕ್ಕೆ ಅಧಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದಿರುವುದು ಹೆಮ್ಮೆಯ ವಿಷಯ ಹಾಗೂ ತಮ್ಮ ವಿದ್ಯಾರ್ಥಿಗಳು ಮಾಡಿದ ಸಾಧನೆಯನ್ನು ಸ್ಮರಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಎಸ್. ಮಸೂದ್ ಸಿರಾಜ್ ರವರು ಮಾತನಾಡಿ ಉರ್ದು ಭಾಷೆಯ ಪ್ರಾಮುಖ್ಯತೆಯನ್ನು ತಿಳಿಸಿದರು. ಈ ಸಂದರ್ಭದಲ್ಲಿ ಡೀನ್ ಅಧ್ಯಯನ ಕೇಂದ್ರದ ಡಾ.ಎನ್. ಆರ್.ಚಂದ್ರೇಗೌಡ, ಹಣಕಾಸು ಅಧಿಕಾರಿಗಳಾದ ಪ್ರೊ. ಎಸ್.ನಿರಂಜನ್ ರಾಜ್, ಉರ್ದು ವಿಭಾಗದ ಪ್ರಾಧ್ಯಾಪಕರಾದ ಡಾ. ಇಶ್ರತ್ ಫಾತಿಮಾ ಹಾಗೂ ಕರಾಮುವಿಯ ಇತರೆ ವಿಭಾಗದ ಅಧ್ಯಾಪಕ, ಅಧ್ಯಾಪಕೇತರ ವರ್ಗದವರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

## ಕ.ರಾ.ಮು.ವಿಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

**ಮೊದಲ ಪುಟದಿಂದ**

ಮೈಸೂರಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಮೈಸೂರು ಒಡೆಯರಿಗೆ ಕೃತಜ್ಞರಾಗಿರಬೇಕು. ಜೊತೆಗೆ ರಾಷ್ಟ್ರಕವಿ ಕುವೆಂಪು, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು ಸೇರಿದಂತೆ ಇನ್ನಿತರೆ ಮಹನೀಯರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯಿಂದಲೇ ಅವರು ಎಷ್ಟು ಕ್ರಿಯಾಶೀಲರಾಗಿ ಕನ್ನಡ ಭಾಷೆಯನ್ನು ಪ್ರೀತಿಸುತ್ತಿದ್ದರು ಎಂಬುದು ತಿಳಿಯುತ್ತದೆ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಮತ್ತೋರ್ವರಾದ ನಿವೃತ್ತ ಪ್ರಾಧ್ಯಾಪಕರೂ ಖ್ಯಾತ ಜಾನಪದ ವಿದ್ವಾಂಸರಾದ ಪ್ರೊ. ಪಿ.ಕೆ ರಾಜಶೇಖರ ರವರು ತಮ್ಮ ಭಾಷಣದಲ್ಲಿ ಕನ್ನಡ ಚೆಲುವನ್ನು ತಮ್ಮ ಜಾನಪದ ಶೈಲಿಯ ಮೂಲಕ ಬಹಳ ಸೊಗಸಾಗಿ ವಿಶ್ಲೇಷಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರಾಮುವಿಯ ಕುಲಸಚಿವರಾದ ಪ್ರೊ. ಎಸ್. ನವೀನ್ ಕುಮಾರ್ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ನಾಡು ನುಡಿಯ ಮಹತ್ವವನ್ನು ತಿಳಿಸಿದರು.

# ರಾಷ್ಟ್ರೀಯ ಶಿಕ್ಷಣ ದಿನಾಚರಣೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮೌಲಾನ ಅಬುಲ್ ಕಲಾಂ ಅಜಾದ್ ರವರ ಜನ್ಮದಿನಾಚರಣೆಯ ಪ್ರಯುಕ್ತ ದಿನಾಂಕ:11.11.2025ರಂದು ರಾಷ್ಟ್ರೀಯ ಶಿಕ್ಷಣ ದಿನ ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ ಹಲಸೇರವರು ವಹಿಸಿದ್ದರು. ಉರ್ದು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮೊಹಮ್ಮದ್ ನಸ್ರುಲ್ಲಾ ಖಾನ್‌ರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ನುಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಮಾನ್ಯ ಪ್ರೊ.ಲಿಂಗರಾಜು ಗಾಂಧಿಯವರು ಮೌಲಾನ ಆಜಾದ್‌ರವರು ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ನೀಡಿದಂತಹ ಕೊಡುಗೆಗಳನ್ನು ಸ್ಮರಿಸಿ ಈಗಿನ ಕಾಲದ ಶೈಕ್ಷಣಿಕ ವ್ಯವಸ್ಥೆಗೂ ಅಂದಿನ ಕಾಲದ ಶೈಕ್ಷಣಿಕ ವ್ಯವಸ್ಥೆಗೂ ಇದ್ದಂತಹ ವ್ಯತ್ಯಾಸವನ್ನ ತಿಳಿಸಿ ಇಂತಹ ಮಹನೀಯರ ಜನ್ಮದಿನಾಚರಣೆಯನ್ನ ರಾಷ್ಟ್ರೀಯ ಶಿಕ್ಷಣ ದಿನವನ್ನಾಗಿ ಆಚರಣೆ ಮಾಡುತ್ತಿರುವುದು ಅತ್ಯಂತ ಸಂತೋಷಕರ ಸಂಗತಿ ಕಾರ್ಯಕ್ರಮಕ್ಕೆ ನನ್ನನ್ನ ಮುಖ್ಯ ಅತಿಥಿಗಳಾಗಿ ಆಹ್ವಾನಿಸಿದ ಉರ್ದು ವಿಭಾಗದ ಪ್ರಾಧ್ಯಾಪಕರಿಗೂ ವಿಶ್ವವಿದ್ಯಾನಿಲಯದ ಕುಲಪತಿಗಳಿಗೂ, ಕುಲಸಚಿವರಿಗೂ ಹಾಗೂ ಪ್ರೊ.ಎಂ. ರಾಮನಾಥಂ ನಾಯುಡುರವರಿಗೆ ಧನ್ಯವಾದಗಳು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೇರವರು ಮೌಲಾನ ಅಜಾದ್‌ರವರು ನೀಡಿದಂತಹ ಶೈಕ್ಷಣಿಕ ಕ್ಷೇತ್ರದ ಕೊಡುಗೆಗಳ ಸವಿಸ್ತಾರವಾದ ಮಾಹಿತಿಯನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ (ಡೀನ್ ಶೈಕ್ಷಣಿಕ) ಪ್ರೊ. ಎಂ ರಾಮನಾಥಂ ನಾಯುಡು, ಕುಲಸಚಿವರಾದ ಪ್ರೊ. ನವೀನ್‌ಕುಮಾರ್ ಎಸ್ ಕೆ, ಪರೀಕ್ಷಾಂಗ ಕುಲಸಚಿವರಾದ ಡಾ. ಆನಂದ್ ಕುಮಾರ್.ಸಿ.ಎಸ್, ಹಣಕಾಸು ಅಧಿಕಾರಿಗಳಾದ ಪ್ರೊ. ಎಸ್.ನಿರಂಜನ್ ರಾಜ್, ಉರ್ದು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಇಶ್ರತ್ ಫಾತಿಮ, ಸಂಯೋಜನಾಧಿಕಾರಿ ಡಾ. ಅವರೆಕಾಡು ವಿಜಯಕುಮಾರ್ ಹಾಗೂ ವಿವಿಧ ವಿಭಾಗದ ಅಧ್ಯಾಪಕ/ಅಧ್ಯಾಪಕೇತರ ವರ್ಗದವರು ಹಾಜರಿದ್ದರು.

# ರಾಷ್ಟ್ರಕವಿ ಕುವೆಂಪು ಅವರ 32ನೇ ಸಂಸ್ಮರಣೆ ಕಾರ್ಯಕ್ರಮ





ದಿನಾಂಕ:11–11–2025ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ 32ನೇ ಸಂಸ್ಮರಣೆ ಪ್ರಯುಕ್ತ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರು ವಹಿಸಿ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ಕುವೆಂಪು ಅವರು ರಚಿಸಿದ ನಾಡಗೀತೆ ಮತ್ತು ರೈತಗೀತೆಯ ಮಹತ್ವವನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್ ಕುಮಾರ್‌ರವರು ಪ್ರತಿಯೊಬ್ಬರ ಮನೆಯಲ್ಲಿಯೂ ಮಹಾನ್ ವ್ಯಕ್ತಿಗಳ ಉತ್ತಮ ಪುಸ್ತಕಗಳ ಗ್ರಂಥಾಲಯವಿರಬೇಕು ಎಂದು ಹೇಳುತ್ತಾ ತಾವು ಬಾಲಕರಾಗಿದ್ದಾಗ ಕುವೆಂಪು ಅವರನ್ನು ಭೇಟಿಯಾದ ಸಂದರ್ಭವನ್ನು ನೆನಪಿಸಿಕೊಂಡರು. ಈ ಸಂದರ್ಭದಲ್ಲಿ ಡೀನ್(ಶೈಕ್ಷಣಿಕ) ರಾದ ಪ್ರೊ. ಎಂ. ರಾಮನಾಥಂ ನಾಯುಡು, ಪರೀಕ್ಷಾಂಗ ಕುಲಸಚಿವರಾದ ಡಾ. ಸಿ.ಎಸ್. ಆನಂದ್ ಕುಮಾರ್, ಹಣಕಾಸು ಅಧಿಕಾರಿಗಳಾದ ಪ್ರೊ. ಎಸ್. ನಿರಂಜನ್‌ರಾಜ್, ಇವರುಗಳು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತ ಭಾಷಣವನ್ನು ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿಯಾದ ಡಾ. ಎನ್.ಆರ್. ಚಂದ್ರೇಗೌಡರವರು ನೆರವೇರಿಸಿದರು. ವಂದನಾರ್ಪಣೆಯನ್ನು ಸ್ಟುಡಿಯೋ ವಿಭಾಗದ ಶ್ರೀ ಸಿದ್ದೇಗೌಡ ನೆರವೇರಿಸಿದರು, ಡಾ. ಅವರೆಕಾಡು ವಿಜಯಕುಮಾರ್, ಸಂಯೋಜನಾಧಿಕಾರಿ ಭಾಷಾಂತರ ಮತ್ತು ವಿದೇಶಿ ಭಾಷಾ ಅಧ್ಯಯನ ವಿಭಾಗ, ಇವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಕರಾಮುವಿಯ ಬೋಧಕ/ಬೋಧಕೇತರ ನೌಕರರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ವಿಶೇಷ ಆಹ್ವಾನಿತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಕುಲಪತಿಗಳಿಗೆ ಅಭಿನಂದನೆ



ದಿನಾಂಕ: 11.11.2025 ರಂದು ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ರವರಿಗೆ ಅಭಿನಂಧನಾ ಸಮಾರಂಭವನ್ನು ಆಯೋಜಿಸಲಾಯಿತು. ಈ ಸಂದರ್ಭ ದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ವಿಶ್ರಾಂತ ಕುಲಪತಿ ಗಳಾದ ಸನ್ಮಾನ್ಯ ಪ್ರೊ.ಎನ್.ಎಸ್.ರಾಮೇಗೌಡರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರಾಮುವಿ ಹಾಗೂ ಮೈಸೂರು ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್.ರಂಗಪ್ಪರವರು, ಬೆಂಗಳೂರು ನಗರ ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ.ಲಿಂಗರಾಜು ಗಾಂಧಿರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ರವರನ್ನು ಅಭಿನಂದಿಸಲಾಯಿತು. ಕುಲಸಚಿವರಾದ ಪ್ರೊ. ನವೀನ್‌ಕುಮಾರ್.ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಪರೀಕ್ಷಾಂಗ ಕುಲಸಚಿವರಾದ ಡಾ.ಆನಂದಕುಮಾರ್.ಸಿ.ಎಸ್, ಹಣಕಾಸು ಅಧಿಕಾರಿಗಳಾದ ಪ್ರೊ. ಎಸ್. ನಿರಂಜನ್ ರಾಜ್ ಹಾಗೂ ಅಧ್ಯಾಪಕ/ ಅಧ್ಯಾಪಕೇತರ ನೌಕರರು, ಆಹ್ವಾನಿತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ದುರ್ಬಲ ವರ್ಗಗಳ ಕಾರ್ಯಕ್ರಮ



ದಿನಾಂಕ:20.12.2025 ರಂದು ಕರಾಮುವಿಯ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ದುರ್ಬಲ ವರ್ಗಗಳ ದಿನಾಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಲಯ–07ರ ವಲಯ ಅಧಿಕಾರಿಗಳಾದ ಶ್ರೀ ಸಂಪತ್ ಕುಮಾರ್‌ರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಚಿನ್ನಯ್ಯ ಪಿ.ಎಂ ಹಾಗೂ ಕರಾಮುವಿಯ ವಿವಿಧ ವಿಭಾಗದ ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಹಾಜರಿದ್ದರು.

# ಪರಿಸರ ಸಂರಕ್ಷಣಾ ಕಾರ್ಯಕ್ರಮ



ದಿನಾಂಕ:30.12.2025ರಂದು ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಕರಾಮುವಿಯ ವತಿಯಿಂದ ಪರಿಸರ ಸಂರಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗುಲ್ಬರ್ಗ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಇ.ಟಿ.ಪುಟ್ಟಯ್ಯ ರವರು ಆಗಮಿಸಿ ಸ್ಪೂರ್ತಿದಾಯಕವಾಗಿ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ನವೀನ್‌ಕುಮಾರ್.ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಹಾಗೂ ಕರಾಮುವಿಯ ಅಧ್ಯಾಪಕ/ಅಧ್ಯಾಪಕೇತರ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

# ಭಾಷಾ ಸೌಹಾರ್ದತಾ ದಿನ



ದಿನಾಂಕ:19.12.2025 ರಂದು ಕರಾಮುವಿಯ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಭಾರತದ ಇತರ ಪ್ರಾದೇಶಿಕ ಭಾಷಾ ಪರಂಪರೆಯನ್ನು ಮತ್ತೊಂದು ಪ್ರದೇಶದ ಜನತೆಗೆ ತಿಳಿ ಹೇಳಿವ ಸಲುವಾಗಿ ಭಾಷಾ ಸೌಹಾರ್ದತಾ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕುಲಪತಿ ಗಳಾದ ಪ್ರೊ.ಶರಣಪ್ಪ ವಿ.ಹಲಸೆರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಭೌತವಿಜ್ಞಾನ ಪ್ರಾಧ್ಯಾಪಕರಾದ ಪ್ರೊ.ಪ್ರದ್ಯುಮ್ನ ಕುಮಾರ್ ಸೇಥಿ ರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ನವೀನ್‌ಕುಮಾರ್.ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಪರೀಕ್ಷಾಂಗ ಕುಲಸಚಿವರಾದ ಡಾ. ಆನಂದಕುಮಾರ್.ಸಿ.ಎಸ್, ಕಾರ್ಯಕ್ರಮದ ಸಂಯೋಜನಾಧಿಕಾರಿಯಾದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ಪಿ.ಮಣಿಯವರು ಹಾಗೂ ಕರಾಮುವಿಯ ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಹಾಜರಿದ್ದರು.

# 'ಸಂಶೋಧನೆ ಮತ್ತು ಪ್ರಕಟಣಾ ನೀತಿಶಾಸ್ತ್ರದ ಕುರಿತು ಆರು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರ





ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರು ಆಯೋಜಿಸಿದ್ದ ಆರು ದಿನಗಳ "ಸಂಶೋಧನೆ ಮತ್ತು ಪ್ರಕಟಣಾ ನೀತಿಶಾಸ್ತ್ರ ಕುರಿತ ರಾಜ್ಯ ಮಟ್ಟದ ಕಾರ್ಯಾಗಾರವು ದಿನಾಂಕ 10–11–2025 ರಿಂದ 15–11–2025ರ ವರೆಗೆ ಕಾವೇರಿ ಸಭಾಂಗಣ, ಕರಾಮುವಿ ಆವರಣ, ಮೈಸೂರು ಇಲ್ಲಿ ಜರುಗಿತು.

ಈ ಕಾರ್ಯಾಗಾರದ ಉದ್ಘಾಟನಾ ಸಮಾರಂಭವು ದಿನಾಂಕ 10–11–2025ರಂದು ಬೆಳಿಗ್ಗೆ 10:30 ಗಂಟೆಗೆ ಕಾವೇರಿ ಸಭಾಂಗಣ, ಕರಾಮುವಿ ಆವರಣ. ಮೈಸೂರು ಇಲ್ಲಿ ಜರುಗಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪ್ರೊ. ಎಸ್.ಆರ್ ನಿರಂಜನ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರು ವಹಿಸಿದ್ದರು. ಈ ಸಂದರ್ಭ ದಲ್ಲಿ ಕರಾಮುವಿಯ ಕುಲ ಸಚಿವರಾದ ಪ್ರೊ. ನವೀನ್ ಕುಮಾರ್ ಎಸ್.ಕೆ ರವರು ಉಪಸ್ಥಿತರಿ ದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಕರಾಮುವಿಯ ಸಹ ಪ್ರಾಧ್ಯಾಪಕರು ಹಾಗೂ ಆರ್‌ಪಿಇಯ ಸಂಯೋಜನಾಧಿ ಕಾರಿಯಾದ ಡಾ. ರಾಜೇಶ್ವರಿ ಹೆಚ್. ಇವರು ನಡೆಸಿಕೊಟ್ಟರು. ಪ್ರಾರ್ಥನೆಯನ್ನು ಶ್ರೀಮತಿ ನಿರ್ಮಲ ಮತ್ತು ಕಾರ್ಯಕ್ರಮದ ನಿರೂಪಣೆಯನ್ನು ಡಾ. ಶೈಲೇಶ್ ರಾಜ್ ಅರಸ್ ಇವರು ನಡೆಸಿಕೊಟ್ಟರು. ಸ್ವಾಗತ ಪರಿಚಯವನ್ನು ಡೀನ್ ಶೈಕ್ಷಣಿಕರಾದ ಪ್ರೊ. ಎಂ.ರಾಮನಾಥಂ ನಾಯುಡುರವರು ನಡೆಸಿಕೊಟ್ಟರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರೊ. ಎಸ್.ಆರ್ ನಿರಂಜನರವರು ಸಂಶೋಧನಾ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾದ ವಿಚಾರಗಳ ಕುರಿತು ಮಾರ್ಗದರ್ಶನ ಮಾಡಿದರು. ವಿದ್ಯಾರ್ಥಿಗಳ ಜೀವನದಲ್ಲಿ ಪಿ.ಎಚ್.ಡಿ. ಒಂದು ಅತ್ಯುನ್ನತ ಪದವಿಯಾಗಿದ್ದು, ಅಂತಹ ಪದವಿಯನ್ನು ಪಡೆಯಲು ಆಯ್ಕೆಯಾಗಿರುವ ತಮಗೆಲ್ಲರಿಗೂ ಸಹ ಶುಭಾಶಯಗಳನ್ನು ತಿಳಿಸಿದರು. ಮುಂದುವರೆದು, ತಮ್ಮ ಸಂಶೋಧನೆಯನ್ನು ಸ್ವತಂತ್ರವಾಗಿ, ಪಾರದರ್ಶಕವಾಗಿ, ಕೃತಿಚೌರ್ಯ ಮಾಡದೇ ಶ್ರಮವಹಿಸಿ ಮಾಡಬೇಕು. ನಾವು ಮಾಡಿದಂತಹ ಸಂಶೋಧನಾ ಪ್ರಬಂಧಗಳು ಯಾವುದಾದರೂ ಒಂದು ವ್ಯವಸ್ಥೆಗೆ, ಸರ್ಕಾರಕ್ಕೆ, ಸಾರ್ವಜನಿಕ ವಲಯಕ್ಕೆ ಅಳವಡಿಸಿಕೊಳ್ಳುವ ರೀತಿಯಲ್ಲಿ ಹಾಗೂ ಸಮಾಜ ಒಪ್ಪಿಕೊಳ್ಳುವ ರೀತಿಯಲ್ಲಿ ಇರಬೇಕು. ಜಾಗತಿಕ ಮಟ್ಟದಲ್ಲಿ ಸಂಶೋಧನೆ ಮತ್ತು ಪ್ರಕಟಣೆ ವಿಷಯದಲ್ಲಿ ಭಾರತ ಮೂರನೇಯ ಸ್ಥಾನದಲ್ಲಿದೆ. ಆದರೆ, ಸಂಖ್ಯಾತ್ಮಕವಾಗಿ ಪ್ರಕಟಣೆಗಳು ತುಲನೆಯಾಗುತ್ತಿದೆ. ಆದರೆ, ಗುಣಾತ್ಮಕತೆಯಿಂದ ಸಂಶೋಧನೆ ಮತ್ತು ಪ್ರಕಟಣೆಯಾಗಬೇಕು ಎಂಬ ವಿಷಯವನ್ನು ತಿಳಿಸಿದರು. ಈ ವಿಷಯವನ್ನು ನಾನು ಅಧಿಕೃತ ದಾಖಲೆಗಳ ಮೂಲಕ ತಿಳಿಸುತ್ತಿದ್ದೇನೆ. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ನಿಯತಕಾಲಿಕೆಗಳಲ್ಲಿ (journals) ಕೆಲವೊಂದು ಲೇಖನಗಳನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುತ್ತದೆ. ಆದರೆ, ಇತ್ತೀಚೆಗೆ ಕೆಲವೊಂದು ನಿಯತಕಾಲಿಕೆಗಳಲ್ಲಿ ಯಾವುದೇ ಗುಣಮಟ್ಟದ ಲೇಖನಗಳು ಇಲ್ಲದಿದ್ದರೂ ಸಹ ಮುದ್ರಣ ಮಾಡಿ ಮೋಸ ಮಾಡುವ ಕೆಲಸ ನಡೆಯುತ್ತಿದೆ. ಆದ್ದರಿಂದ, ಸಂಶೋಧನಾ ವಿದ್ಯಾರ್ಥಿಗಳು ಆ ರೀತಿಯ ಮೋಸದ ಚಟುವಟಿಕೆಗಳಿಗೆ ಬಲಿಯಾಗಬಾರದು, ತಾವು ರಚನೆ ಮಾಡಿದ ಸಂಶೋಧನಾ ಪ್ರಬಂಧವು ರಚನಾತ್ಮಕವಾಗಿ, ಸಮಾಜದ ಏಳಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿರಬೇಕು ಆಗಿದ್ದಾಗ ಮಾತ್ರ ನಮ್ಮ ಸಂಶೋಧನಾ ಕಾರ್ಯ ಸಾರ್ಥಕವಾಗುತ್ತದೆ. ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸುವ ಪ್ರಾರಂಭದಲ್ಲಿ ವಿಷಯದ ಶೀರ್ಷಿಕೆ (Title) ಆಯ್ಕೆಯನ್ನು ಮಾರ್ಗದರ್ಶಕರು ಆಯ್ಕೆ ಮಾಡುತ್ತಾರೆ. ಇದರ ಬದಲು ಸಂಶೋಧನಾ ವಿದ್ಯಾರ್ಥಿಗಳೇ 5–6 ವಿಷಯಗಳ ಆಯ್ಕೆಯನ್ನು ಇಟ್ಟುಕೊಂಡು ಒಂದನ್ನು ತಮ್ಮ ತಮ್ಮ ಮಾರ್ಗದರ್ಶಕರ (Guide) ಜೊತೆಗೆ ಸಮಾಲೋಚಿಸಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಂದುವರೆದು ಮಾತನಾಡಿದ ಅವರು ಒಂದೊಂದು ವಿಭಾಗದಲ್ಲಿ ಕನಿಷ್ಠ ಒಂದೊಂದು ಪೋಸ್ಟ್ ಡಾಕ್ಟರೇಟ್ ಪದ್ಧತಿಯನ್ನು ವಿಶ್ವವಿದ್ಯಾ ಲಯದ ವತಿಯಿಂದ ಜಾರಿಗೆ ತರಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯದ ಮಾನ್ಯ ಕುಲಪತಿಗಳಿಗೆ ಸಲಹೆ ನೀಡಿದರು. ಕೊನೆಯದಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ಸಲಹೆ ನೀಡುವುದೇನೆಂದರೆ, ಯುಜಿಸಿ ನಿಯಮಾವಳಿಗಳ ಪ್ರಕಾರ ಪ್ರಬಂಧವನ್ನು ಗುಣಮಟ್ಟದಿಂದ ನಿಯಮಾನುಸಾರ ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೂ ಹಾಗೂ ಸಮಾಜಕ್ಕೂ ಉತ್ತಮವಾದ ಹೆಸರು/ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿ ಎಂದು ಶುಭ ಕೋರಿದರು.

ನಂತರ ಕರಾಮುವಿಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರು ಮಾತನಾಡಿ ವಿಶ್ವವಿದ್ಯಾಲಯದ ಬೆಳವಣಿಗೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು ಮತ್ತು ನ್ಯಾಕ್ (NAAC) ನಿಂದ ಎ+ ಮಾನ್ಯತೆ ಪಡೆಯಲು ತಾವು ತೆಗೆದುಕೊಂಡಿರುವ ಕ್ರಮ, ಪಟ್ಟಿರುವ ಶ್ರಮದ ಬಗ್ಗೆ ವಿವರವಾಗಿ ತಿಳಿಸಿದರು. ಪ್ರೊ. ಎಸ್.ಆರ್ ನಿರಂಜನರವರು ತಿಳಿಸಿರುವ ಸಲಹೆಗಳನ್ನು, ಅಳವಡಿಸಿಕೊಳ್ಳುತ್ತೇವೆ. ಹಾಗೆಯೇ, ಪೋಸ್ಟ್ ಡಾಕ್ಟರೇಟ್ ಪದವಿಯನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸುತ್ತೇವೆ.

ಈಗಾಗಲೇ ಒಂದೊಂದು ವಿಭಾಗದ ಪ್ರಾಧ್ಯಾಪಕರುಗಳಿಗೆ ರೂ ಲಕ್ಷಗಳಂತೆ ಮೊತ್ತವನ್ನು ಕಿರು ಸಂಶೋಧನೆ ಕೈಗೊಳ್ಳಲು ವಿಶ್ವವಿದ್ಯಾಲಯದಿಂದ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಗಳು ನಾವು ಮಾಡಬೇಕಾದ ಕಾರ್ಯಗಳನ್ನು ನಿಷ್ಠೆಯಿಂದ, ಪಾರದರ್ಶಕತೆಯಿಂದ ಮಾಡಿದಲ್ಲಿ ಯಾರಿಗೂ ಭಯಪಡುವ ಅಗತ್ಯತೆ ಇರುವುದಿಲ್ಲ. ಅದಕ್ಕಾಗಿಯೇ ಶಿಕ್ಷಣವೇ ಶಕ್ತಿ ಎಂದು ಹೇಳಲಾಗಿದೆ. ತಾವುಗಳು ಉತ್ತಮ ಸಂಶೋಧನೆಯನ್ನು ಮಾಡುವುದರ ಮೂಲಕ ತಮ್ಮ ತಮ್ಮ ವಿಭಾಗದಲ್ಲಿ ಉತ್ತಮ ಸಂಶೋಧನಾ ಪ್ರಬಂಧಗಳನ್ನು ಸಿದ್ಧಪಡಿಸಲು ಕರೆ ನೀಡಿದರು. ಈ ಕಾರ್ಯಾಗಾರಕ್ಕೆ ಮುಖ್ಯ ಅತಿಥಿಗಳನ್ನಾಗಿ ಪ್ರೊ. ಎಸ್.ಆರ್ ನಿರಂಜನರವರನ್ನು ಯಾಕೆ ಬರಲು ನಿರ್ಣಯಿಸಲಾಗಿದೆ ಎಂಬುದು ಅವರ ಭಾಷಣದ ಅಂಶಗಳಿಂದ ತಿಳಿದು ಬಂದಿದೆ ಎಂದು ತಿಳಿಸಿದರು. ತಾವೆಲ್ಲರೂ ಈ 6 ದಿನಗಳ ಕಾರ್ಯಾಗಾರದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡು ಉತ್ತಮ ಸಂಶೋಧನಾ ವಿದ್ವಾಂಸರು (Research Scholars) ಆಗಲೆಂದು ಶುಭ ಕೋರಿದರು.

# ಬೀಳ್ಕೊಡುಗೆಯ ಕಾರ್ಯಕ್ರಮ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರು ಆಯೋಜಿಸಿದ್ದ ಆರು ದಿನಗಳ "ಸಂಶೋಧನೆ ಮತ್ತು ಪ್ರಕಟಣಾ ನೀತಿಶಾಸ್ತ್ರ" ಕುರಿತ ರಾಜ್ಯ ಮಟ್ಟದ ಕಾರ್ಯಾಗಾರವು ದಿನಾಂಕ 10-11-2025 ರಿಂದ 15-11-2025ರವರೆಗೆ ಕಾವೇರಿ ಸಭಾಂಗಣ, ಕರಾಮುವಿ ಅವರಣ, ಮೈಸೂರು ಇಲ್ಲಿ ಯಶಸ್ವಿಯಾಗಿ ಜರುಗಿತು.

ಈ ಆರು ದಿನಗಳ ಕಾರ್ಯಾಗಾರದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದಿದ್ದ ಸುಮಾರು 125 ಸಂಶೋಧನಾರ್ಥಿಗಳು ಹಾಗೂ ಬಾಹ್ಯ ವಿಶ್ವವಿದ್ಯಾನಿಲಯದ ಸಂಶೋಧನಾರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಪ್ರತಿ ದಿನವು ಕರಾಮುವಿಯ ಅಧ್ಯಾಪಕರು ಮತ್ತು ಬಾಹ್ಯ ಸಂಪನ್ಮೂಲ ಆಧ್ಯಾಪಕರುಗಳಿಂದ ಕಾರ್ಯಗಾರದ ತರಗತಿಗಳನ್ನು ನಡೆಸಲಾಯಿತು ಎಂದು ತಿಳಿಸಿದರು.

ನಂತರ ಆರು ದಿನಗಳ ಕಾರ್ಯಾಗಾರದ ತರಗತಿಗಳಿಗೆ ಹಾಜರಾಗಿದ್ದ ಪ್ರತಿ ವಿಭಾಗದ ಒಬ್ಬರು ಸಂಶೋಧನಾರ್ಥಿಗಳಿಗೆ ಮಾನ್ಯ ಡೀನ್(ಶೈಕ್ಷಣಿಕ) ರಾದ ಪ್ರೊ.ಎಂ ರಾಮನಾಥಂ ನಾಯುಡು ಪರೀಕ್ಷಾಂಗ ಕುಲಸಚಿವರಾದ ಸಿ.ಎಸ್.ಆನಂದ್ ಕುಮಾರ್ ಅವರಿಂದ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಗಾರದ ಸಲಹಾ ಸಮಿತಿ ಸದಸ್ಯರುಗಳಿಗೆ ಪ್ರಮಾಣ ಪತ್ರ ಮತ್ತು ನೆನಪಿನ ಕಾಣಿಕೆ ಯನ್ನು ನೀಡಲಾಯಿತು.

ನಂತರ ಆರು ದಿನಗಳ ಕಾರ್ಯಗಾರದ ಬಗ್ಗೆ ಸುಮಾರು 10ಕ್ಕೂ ಹೆಚ್ಚು ಸಂಶೋಧನಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಉಳಿದ ಸಂಶೋಧನಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ, ಕಾರ್ಯಕ್ರಮವನ್ನು ಸಂಪನ್ನಗೊಳಿಸಲಾಯಿತು.

# ಸಂವಿಧಾನ ದಿನಾಚರಣೆ ಕಾರ್ಯಕ್ರಮ




ದಿನಾಂಕ:26.11.2025 ರಂದು ಕಾವೇರಿ ಸಭಾಂಗಣದಲ್ಲಿ ಕರಾಮುವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಚಾರ ಸಂಕಿ ರಣವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಪಿ.ಎಂ. ನರೇಂದ್ರಸ್ವಾಮಿ ರವರು ಆಗಮಿಸಿದ್ದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಿ.ರಂಗೇಗೌಡ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ನವೀನ್‌ಕುಮಾರ್.ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಪರೀಕ್ಷಾಂಗ ಕುಲಸಚಿವರಾದ ಡಾ.ಆನಂದಕುಮಾರ್.ಸಿ.ಎಸ್, ಹಣಕಾಸು ಅಧಿಕಾರಿಗಳಾದ ಪ್ರೊ. ಎಸ್.ನಿರಂಜನ್ ರಾಜ್‌ರವರು ಹಾಗೂ ವಿಶೇಷ ಆಹ್ವಾನಿತರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.





## ಆಡಳಿತ ಮಂಡಳಿ

* ಪ್ರೊ. ಶರಣಪ್ಪ ವಿ. ಹಲಸೆ, ಕುಲಪತಿಗಳು
* ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು
* ಪ್ರೊ. ಎಂ.ರಾಮನಾಥಂ ನಾಯುಡು, ಡೀನ್ (ಶೈಕ್ಷಣಿಕ)
* ಡಾ. ಎನ್.ಆರ್.ಚಂದ್ರೇಗೌಡ, ಡೀನ್(ಅಧ್ಯಯನ ಕೇಂದ್ರ)
* ಪ್ರೊ. ನಿರಂಜನ್‌ರಾಜ್ ಎಸ್., ಹಣಕಾಸು ಅಧಿಕಾರಿ
* ಡಾ. ಆನಂದ್ ಕುಮಾರ್ ಸಿ.ಎಸ್., ಕುಲಸಚಿವರು (ಪರೀಕ್ಷಾಂಗ)

## ಸಂಪಾದಕ ಮಂಡಳಿ

* ಡಾ. ಸಂತೋಷ್ ನಾಯಕ್ ಆರ್, ಸಂಪಾದಕರು
* ಡಾ. ಹರೀಶ ಎನ್, ಉಪ ಸಂಪಾದಕರು
* ಡಾ. ಅವರೆಕಾಡು ವಿಜಯಕುಮಾರ್, ಉಪ ಸಂಪಾದಕರು
* ಡಾ. ಶೀಲಾ ವಿ, ಉಪ ಸಂಪಾದಕರು
* ಶ್ರೀ ಮುನಿಸ್ವಾಮಿ , ಸಂಪಾದಕೀಯ ಸಹಕಾರ

ಬರಹಗಳನ್ನು ksounews@gmail.com ಗೆ ಕಳುಹಿಸುವುದು.

ವಿಳಾಸ

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**

**ಮುಕ್ತ ಗಂಗೋತ್ರಿ, ಮೈಸೂರು- 570006**

Website: www.ksoumysuru.ac.in
Facebook: www.facebook.com/ksoumysuru
Twitter: www.twitter.com/ksoumysuru

# ಅಲ್ಪಸಂಖ್ಯಾತರ ಕಲ್ಯಾಣ ದಿನ



ದಿನಾಂಕ:17.12.2025 ರಂದು ಕರಾಮುವಿಯ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಅಲ್ಪಸಂಖ್ಯಾತರ ಕಲ್ಯಾಣ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ಮತ್ತು ಪೌಷ್ಠಿಕ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ ಪ್ರೊ. ಅಸ್ನಾ ಉರುಜ಼್‌ರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ನವೀನ್‌ಕುಮಾರ್. ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಪರೀಕ್ಷಾಂಗ ಕುಲಸಚಿವರಾದ ಡಾ.ಆನಂದಕುಮಾರ್.ಸಿ.ಎಸ್, ಹಣಕಾಸು ಅಧಿಕಾರಿ ಗಳಾದ ಪ್ರೊ. ಎಸ್.ನಿರಂಜನ್ ರಾಜ್, ಪ್ರಸಾರಾಂಗದ ನಿರ್ದೇಶಕರಾದ ಡಾ.ಸಂತೋಷ್‌ನಾಯಕ್.ಆರ್, ಕಾರ್ಯಕ್ರಮದ ಸಂಯೋಜನಾಧಿಕಾರಿ ಹಾಗೂ ಉರ್ದು ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮೊಹಮ್ಮದ್ ನಸ್ರುಲ್ಲಾ ಖಾನ್, ಡಾ.ಇಶ್ರತ್ ಫಾತಿಮಾ ಹಾಗೂ ವಿಶೇಷ ಆಹ್ವಾನಿತರು ಕರಾಮುವಿಯ ಅಧ್ಯಾಪಕ, ಅಧ್ಯಾಪಕೇತರ ವರ್ಗದವರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ರಾಷ್ಟ್ರಕವಿ ಕುವೆಂಪುರವರ 122ನೇ ಜನ್ಮ ದಿನಾಚರಣೆ



ದಿನಾಂಕ:29.12.2025ರಂದು ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ರವರ 122ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ.ಟಿ.ಕೆ ಕೆಂಪೇಗೌಡರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ನವೀನ್‌ಕುಮಾರ್.ಎಸ್.ಕೆ, ಡೀನ್(ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಪ್ರಸ್ತಾವಿಕ ನುಡಿಯನ್ನು ಕುವೆಂಪು ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಹಾಗೂ ಡೀನ್ ಅಧ್ಯಯನ ಕೇಂದ್ರದ ಡಾ.ಎನ್.ಆರ್ ಚಂದ್ರೇಗೌಡರು, ಪರೀಕ್ಷಾಂಗ ಕುಲಸಚಿವರಾದ ಡಾ.ಆನಂದಕುಮಾರ್.ಸಿ.ಎಸ್, ಭಾಷಾಂತರ ಮತ್ತು ವಿದೇಶಿ ಭಾಷಾ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾದ ಡಾ. ಅವರೆಕಾಡು ವಿಜಯಕುಮಾರ್ ಹಾಗೂ ನಿರೂಪಣೆಯನ್ನು ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮಮತಾ ರವರು ನೆಡೆಸಿಕೊಟ್ಟರು. ಕರಾಮುವಿಯ ಬೋಧಕ/ಬೋಧಕೇತರ ನೌಕರರು ಸಂಶೋಧನಾ ವಿದ್ಯಾರ್ಥಿಗಳು, ವಿಶೇಷ ಆಹ್ವಾನಿತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

